<u>ದಿಃ 23-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : 2 ರಿಂದ 5 ನೇ ಪ್ರತಿವಾದಿ ಪರ ಶ್ರೀ. PBP ವಕೀಲರಿಂದ:</u>**

ನನ್ನ ಅಜ್ಜ ಗುರಪ್ಪನ ಹೆಸರಿನಲ್ಲಿ ಸ.ನಂ. 120, 123, 126 ಒಟ್ಟು 30 ಎಕರೆ ಜಮೀನು ಇರುತ್ತದೆ. ನನ್ನ ತಂದೆಗೆ ಸ.ನಂ. 123 ರಲ್ಲಿ ಪಾಲು ಬಂದಿರುತ್ತದೆ. ನನ್ನ ದೊಡ್ಡಪ್ಪ ಬಸಣ್ಣನಿಗೆ 123 ರಲ್ಲಿ ಪಾಲು ಇರುತ್ತದೆ. ಅಣ್ಣಾರಾಯ ರವರಿಗೆ ಸ.ನಂ. 120 ರಲ್ಲಿ ಪಾಲು ಬಂದಿರುತ್ತದೆ ಸಾಕ್ಷಿ 123 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸ.ನಂ. 120 ರಲ್ಲಿ ಸುಮಾರು 40 ವರ್ಷಗಳಿಂದ ಅಣ್ಣಾರಾಯ ಮತ್ತು 2, 4 ಮತ್ತು 5 ನೇ ಪ್ರತಿವಾದಿ ರವರು ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸರಿ. ಅಣ್ಣಾರಾಯ ತೀರಿಕೊಂಡು 5-6 ವರ್ಷ ಆಗಿರುತ್ತದೆ. ಸದರಿಯವರು ತೀರಿಕೊಂಡ ನಂತರ ಜಮೀನು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆತನಕ್ಕೆ ಸ.ನಂ. 82/2 ಎ 6 ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ಅಜ್ಜನ ಮಕ್ಕಳು 3 ಜನರಿಗೆ ಬಂದಿರುತ್ತದೆ. ಸ.ನಂ. 123 ರಲ್ಲಿ ನನ್ನ ತಂದೆ ಪಾಲಿಗೆ ಬಂದ ಜಮೀನನ್ನು ನಾವೇ ಉಳುಮೆ ಮಾಡುತ್ತಿದ್ದೇವೆ. ದಾವಾ ಆಸ್ತಿ ಅಣ್ಣಾರಾಯ ರವರಿಗೆ ಬಂದಿದ್ದರೂ ಸಹ ಅದನ್ನು ಪಡೆಯುವ ದುರುದ್ದೇಶದಿಂದ ವಾದಿ ಮತ್ತು ನಾನು ಸೇರಿಕೊಂಡು ಸುಳ್ಳು ದಾವೆ ಹೂಡಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ತಂದೆ ಬಸಣ್ಣ ಸ.ನಂ. 123 ರಲ್ಲಿ ತಮಗೆ ಬಂದ ಪಾಲನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿ.

**<u>ಪಾಟೀ ಸವಾಲು : ವಾದಿಯರ ಪರ ಶ್ರೀ. SSP ವಕೀಲರಿಂದ:</u>**

ಗುರಪ್ಪ ನನ್ನ ಅಜ್ಜ ಎಂದರೆ ಸರಿ. ಅವರಿಗೆ 4 ನಾಲ್ಕು ಜನ ಮಕ್ಕಳಿದ್ದು ಅವರುಗಳು ಬಸಣ್ಣ, ಶರಣಪ್ಪ ಅಣ್ಣಾರಾಯ ಮತ್ತು ನಾಗಣ್ಣ ಇರುತ್ತಾರೆ ಎಂದರೆ ಸರಿ. ಶರಣಪ್ಪ ರವರು ತೀರಿಕೊಂಡಿದ್ದು ಅವರಿಗೆ ಹೆಂಡತಿ ಮತ್ತು ಮಕ್ಕಳು ಇಲ್ಲ ಎಂದರೆ ಸರಿ. ಬಸಣ್ಣ ರವರಿಗೆ 4 ಜನ ಹೆಣ್ಣು ಮಕ್ಕಳಿದ್ದು ಅವರು ವಾದಿಯರು ಇರುತ್ತಾರೆ ಎಂದರೆ ಸರಿ. ನಾಗಣ್ಣನಿಗೆ ನಾನು ಒಬ್ಬನೇ ಮಗ ಎಂದರೆ ಸರಿ. ಅಣ್ಣಾರಾಯರಿಗೆ ಪ್ರತಿವಾದಿ 2 ರಿಂದ 5 ರವರು ಮಕ್ಕಳು ಎಂದರೆ ಸರಿ.

ಸ.ನಂ. 120, 9 ಎಕರೆ 26 ಗುಂಟೆ ಜಮೀನು ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ಈ ಆಸ್ತಿಯಲ್ಲಿ ಇವತ್ತಿನವರೆಗೂ ಪಾಲುವಾಟ್ನಿ ಆಗಿಲ್ಲ ಎಂದರೆ ಸರಿ. ಆದ್ದರಿಂದ ಗುರಪ್ಪನ 4 ಜನ ಗಂಡು ಮಕ್ಕಳಿಗೆ ಸಮಪಾಲು ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯರಿಗೂ ಸಹ ಪಾಲು ಇದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ